**K.S. SAROJAMMA**
Deputy Secretary to Government
[Disaster Management & Stamps & Registration]
Revenue Department

ದಿನಾಂಕ: 10-9-2014, 5.00ಘಂಟೆ

## ಜಮ್ಮು ಮತ್ತು ಕಾಶ್ಮೀರದ ಪ್ರವಾಹದ ಬಗ್ಗೆ ಪತ್ರಿಕಾ ಪ್ರಕಟಣೆ

ಕಳೆದ 4-5 ದಿನಗಳಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಉಂಟಾಗಿರುವ ಪ್ರವಾಹದಿಂದ ಕರ್ನಾಟಕದ ಹಲವಾರು ಪ್ರವಾಸಿಗರು ಸಿಲುಕಿಹಾಕಿಕೊಂಡಿದ್ದು, ಅವರ ನೆರವಿಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಇದುವರೆವಿಗೂ ರಾಜ್ಯದ ಸುಮಾರು 640 ಪ್ರವಾಸಿಗರು ಸಂಕಷ್ಟಕ್ಕೆ ಸಿಲುಕಿದ್ದು, ಇದರಲ್ಲಿ ಇತ್ತೀಚಿನ ಮಾಹಿತಿಯಂತೆ ಸುಮಾರು 200 ಜನರನ್ನು ರಕ್ಷಿಸಲಾಗಿದ್ದು, ಇದರಲ್ಲಿ ಕೆಲವರು ಈಗಾಗಲೇ ಬೆಂಗಳೂರಿಗೆ ಹಿಂತಿರುಗುತ್ತಿದ್ದಾರೆ. ದಿನಾಂಕ: 8-9-2014ರ ಬೆಳಿಗ್ಗೆಯಿಂದ ಮಳೆಯ ಪ್ರಮಾಣ ಹಾಗೂ ಪ್ರವಾಹದ ತೀವ್ರತೆ ಕಡಿಮೆಯಾಗಿದ್ದು, ಸೇನೆಯ ನೆರವಿನಿಂದ ಸುಮಾರು 60,000 ಜನರನ್ನು ರಕ್ಷಿಸಲಾಗಿದ್ದು ಇದರಲ್ಲಿ ಕರ್ನಾಟಕದ ಹಲವಾರು ಮಂದಿ ಇರುವ ಸಾಧ್ಯತೆ ಇದೆ.
2. ಜಮ್ಮು ಮತ್ತು ಕಾಶ್ಮೀರದಲ್ಲಿ ಜನರನ್ನು ರಕ್ಷಿಸಲು ಜಮ್ಮು ಮತ್ತು ಕಾಶ್ಮೀರದ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಭಾರತೀಯ ಸೇನೆ, ಬಿ.ಎಸ್.ಎಫ್, ಎನ್.ಡಿ.ಆರ್.ಎಫ್ ವತಿಯಿಂದ ರಕ್ಷಣಾ ಕಾರ್ಯ ನಡೆಯುತ್ತಿದೆ.
3. ಜಮ್ಮು ಮತ್ತು ಕಾಶ್ಮೀರದಲ್ಲಿ ಕರ್ನಾಟಕದ ಅನೇಕ ಪ್ರವಾಸಿಗರು ಸಿಲಿಕಿಹಾಕಿಕೊಂಡಿದ್ದು, ಅವರನ್ನು ಸುರಕ್ಷಿತವಾಗಿ ಕರೆ ತರಲು ರಾಜ್ಯ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳಾದ ಶ್ರೀ ರಮಣದೀಪ್, ಭಾ.ಆ.ಸೇ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಹಾಗೂ ಶ್ರೀ ಮೋಹನ್ ಕುಮಾರ್, ಮ್ಯಾನೇಜರ್, ಕರ್ನಾಟಕ ಭವನ, ನವದೆಹಲಿ ರವರನ್ನು ನಿಯೋಜಿಸಲಾಗಿದೆ. ಸದರಿ ಅಧಿಕಾರಿಗಳು, ಮೊಬೈಲ್ ಸಿಮ್ ಹಾಗೂ ಬ್ಯಾಟರಿ, ಪವರ್ ಬ್ಯಾಂಕ್ ನೊಂದಿಗೆ ದಿನಾಂಕ:9.9.2014ರ ಬೆಳಿಗ್ಗೆ ಶ್ರೀನಗರಕ್ಕೆ ತಲುಪಿದ್ದಾರೆ.
4. ಶ್ರೀ ರಮಣದೀಪ್‌ರವರು ಕರ್ನಾಟಕದ ನೂರಾರು ಜನರನ್ನು ಸಂಪರ್ಕಿಸಿದ್ದು, ಸುಮಾರು 70 ಜನರನ್ನು ಶ್ರೀನಗರದಿಂದ ದೆಹಲಿಗೆ ಸುರಕ್ಷಿತವಾಗಿ ವಿಮಾನ ಮೂಲಕ ಕಳುಹಿಸಿರುತ್ತಾರೆ ಹಾಗೂ ಸುಮಾರು 30 ಜನರನ್ನು ರಾಜಭವನ ಹೆಲಿಪ್ಯಾಡ್‌ನಿಂದ ಶ್ರೀನಗರ ವಿಮಾನ ನಿಲ್ದಾಣಕ್ಕೆ ತಲುಪಲು ಸಹಕರಿಸಿದ್ದಾರೆ. ಹಾಗೂ ಇವರಿಗೆ ಆಹಾರ ಮತ್ತು ನೀರು ಒದಗಿಸುವಲ್ಲಿ ಸಹಕರಿಸಿರುತ್ತಾರೆ ಮತ್ತು ರಕ್ಷಣಾ ಕಾರ್ಯಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತದ್ದಾರೆ. 200-300 ಕರ್ನಾಟಕದ ಜನರು ಇನ್ನೂ ರಾಜಭವನ ಹೆಲಿಪ್ಯಾಡ್‌ನಲ್ಲಿ ಸರದಿಯಲ್ಲಿ ಕಾಯುತ್ತಿದ್ದು, ಇವರನ್ನೂ ಸಹ ಸುರಕ್ಷಿತವಾಗಿ ವಿಮಾನ ನಿಲ್ದಾಣ ಮುಟ್ಟುವಲ್ಲಿ ಸಹಕರಿಸುತ್ತಿದ್ದಾರೆ.
5. ಶ್ರೀನಗರ ವಿಮಾನ ನಿಲ್ದಾಣ ತಲುಪಿದ ಎಲ್ಲಾ ಕನ್ನಡಿಗರಿಗೆ ಆಹಾರ ನೀರು ಮತ್ತು ದೆಹಲಿಗೆ ತೆರಳಲು ಅನುಕೂಲ ಮಾಡಿಕೊಡುತ್ತಿದ್ದಾರೆ.
6. ನವದೆಹಲಿಯಿಂದ ಬೆಂಗಳೂರಿಗೆ ವಾಪಸ್ಸಾಗಲು ಯಾವುದೇ ನೆರವು ಬೇಕಾಗಿದ್ದಲ್ಲಿ ದೆಹಲಿಯಲ್ಲಿರುವ ಕರ್ನಾಟಕ ಭವನದ ಈ ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸಲು ಸಾರ್ವಜನಿಕರಲ್ಲಿ ಕೋರಿದೆ. ಜಂಟಿ ಸ್ಥಾನಿಕ ಆಯುಕ್ತರು ಶ್ರೀ ಸುಪ್ರಸನ್ನ : 9868393971 ಹಾಗೂ ಶ್ರೀ ಶಂಭು ಲಿಂಗಪ್ಪ : 9868393989.

# 501, 3rd Gate, 5th Floor, M.S. Building, Dr. B.R. Ambedkar Veedhi, Bangalore - 560 001
Tel : 080-22261314 / 22032426 (Office) (Fax) : 22258166

**K.S. SAROJAMMA**
Deputy Secretary to Government
[Disaster Management & Stamps & Registration]
Revenue Department

7. ಜಮ್ಮು ಮತ್ತು ಕಾಶ್ಮೀರದಿಂದ ಹಿಂತಿರುಗುವವರನ್ನು ಬೆಂಗಳೂರು ವಿಮಾನ ನಿಲ್ದಾಣದಿಂದ ಸುರಕ್ಷಿತವಾಗಿ ತಮ್ಮ ಮನೆಗಳಿಗೆ ತೆರಳಲು ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ಶ್ರೀ ಕೆ.ವಿ.ರಾಮ : 8050831319, ಶ್ರೀ ಪ್ರಹಲಾದ್ : 9844075683, ಶ್ರೀ ಜಯವಿಭಾಸ್ವಾಮಿ: 9844065683 ರವನ್ನು ಸಂಪರ್ಕಿಸಲು ಕೋರಿದೆ.

8. ಇದುವರೆವಿಗೂ ಪತ್ತೆಯಾಗದವರ ಹೆಸರು, ವಯಸ್ಸು ಮತ್ತು ಇತರೆ ವೈಯಕ್ತಿಕ ವಿವರಗಳನ್ನು ಕಂದಾಯ ಇಲಾಖೆಯ ವಿಪತ್ತು ನಿರ್ವಹಣೆಯ ಸಹಾಯವಾಣಿಗೆ ಒದಗಿಸಿದಲ್ಲಿ ಅವರನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗುವುದೆಂದು ಸಾರ್ವಜನಿಕರಲ್ಲಿ ವಿನಂತಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರದ ಪ್ರವಾಹದಲ್ಲಿ ಸಿಲುಕಿಕೊಂಡವರ ಪ್ರವಾಸಿಗರ ಮಾಹಿತಿಯನ್ನು ಕಾಲಕಾಲಕ್ಕೆ ಪಡೆಯಲು ಮತ್ತು ಸಂಬಂಧಪಟ್ಟವರಿಗೆ ಮಾಹಿತಿ ಒದಗಿಸಲು ರಾಜ್ಯ ಸರ್ಕಾರದ ಕಂದಾಯ ಇಲಾಖೆಯ ವಿಪತ್ತು ನಿರ್ವಹಣೆ ವಿಭಾಗದಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಕೇಂದ್ರದಲ್ಲಿ 24*7 ಸಹಾಯವಾಣಿ ತೆರೆಯಲಾಗಿದೆ ದೂರವಾಣಿ ಸಂಖ್ಯೆ : 1070, 22340676.

(ಕೆ.ಎಸ್.ಸರೋಜಮ್ಮ)
ಉಪ ಕಾರ್ಯದರ್ಶಿ

# 501, 3rd Gate, 5th Floor, M.S. Building, Dr. B.R. Ambedkar Veedhi, Bangalore - 560 001
Tel : 080-22261314 / 22032426 (Office) (Fax) : 22258166